# ಒಳ್ಳೆಯ ಕಥೆಯ ಭಾಗವಾಗುವ ಖುಷಿ ಎಲ್ಲಕ್ಕಿಂತ ದೊಡ್ಡದು

**ಈಗಷ್ಟೇ ಚಂದನವನದೊಳಗೆ ಇಣುಕಿನೋಡುತ್ತಿರುವ ಹೊಸ ಪ್ರತಿಭೆ ನಿಧಿ ಹೆಗಡೆ. ಎರಡು ಆಫ್‌ಬೀಟ್ ಸಿನಿಮಾಗಳಲ್ಲಿ ನಟಿಸಿ ಸೈ ಅನಿಸಿಕೊಂಡಿರುವ ಅವರಿಗೆ ಮುಖ್ಯವಾಹಿನಿಯಲ್ಲಿ ಮಿಂಚುವ ಹಂಬಲವೂ ಇದೆ.**

■ ಪದ್ಮನಾಭ ಭಟ್

‘ಈ ವರ್ಷ ಗೋವಾದಲ್ಲಿ ನಡೆದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ, ಮೊದಲ ಬಾರಿಗೆ ನಾಲ್ಕು ಕನ್ನಡ ಸಿನಿಮಾಗಳು ಪ್ರದರ್ಶನ ಕಂಡವು. ಅದರಲ್ಲಿ ಎರಡು ಸಿನಿಮಾಗಳಲ್ಲಿ (‘ನೀಲಿ ಹಕ್ಕಿ’, ‘ಡೊಳ್ಳು’) ನಾನೇ ನಾಯಕಿಯಾಗಿ ನಟಿಸಿದ್ದೇನೆ’ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ನಿಧಿ ಅವರ ಕಣ್ಣುಗಳಲ್ಲಿ ಕನಸುಗಳು ಸರತಿಸಾಲಿನಲ್ಲಿ ನಿಂತಂತಿದ್ದವು. ಮಾತುಗಳಲ್ಲಿ ವಿಶ್ವಾಸದ ಜೊತೆಗೆ ಆಶಾವಾದವೂ ತುಳುಕುತ್ತಿತ್ತು.

ಹಲವು ಊರುಗಳ ನೀರು ಕುಡಿದೇ ಬೆಳೆದ ಹುಡುಗಿ ನಿಧಿ ಹೆಗಡೆ. ಹುಟ್ಟಿದ್ದು ಉತ್ತರ ಕನ್ನಡದ ಸಿರ್ಸಿಯಲ್ಲಿ. ನಂತರ ತಂದೆಯ ಉದ್ಯೋಗ ನಿಮಿತ್ತ ಪುಣೆಗೆ ಹೋಗಿ ಹತ್ತನೇ ತರಗತಿಯವರೆಗೆ ಅಲ್ಲಿಯೇ ಓದಿದರು. ಅಲ್ಲಿಂದ ಬೆಂಗಳೂರಿಗೆ ವರ್ಗಾವಣೆ. ಕಾಲೇಜು ಬದುಕಿನ ರೇಖಾಚಿತ್ರಕ್ಕೆ ರಂಗು ತುಂಬಿಕೊಂಡಿದ್ದು ಬೆಂಗಳೂರಿನಲ್ಲಿಯೇ.

ನಿಧಿಗೆ ಚಿಕ್ಕಂದಿನಿಂದಲೂ ನಟನೆಯಲ್ಲಿ ವಿಶೇಷ ಆಸಕ್ತಿಯಿತ್ತು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ನಾಟಕಗಳಲ್ಲಿ ಅದು ಅಭಿವ್ಯಕ್ತಿಗೊಳ್ಳುತ್ತಿತ್ತು. ಆದರೆ ‘ಓದೇ ಮೊದಲು’ ಎಂಬ ನಂಬಿಕೆಯನ್ನೇ ನೆಚ್ಚಿಕೊಂಡು ಪದವಿ ಮುಗಿಸಿದರು. ಪದವಿಯಲ್ಲಿ ಅವರು ಆಯ್ದುಕೊಂಡ ವಿಷಯಗಳು ಸೈಕಾಲಜಿ, ಸಾಹಿತ್ಯ ಮತ್ತು ಪತ್ರಿಕೋದ್ಯಮ.

‘ನಾನು ಈ ವಿಷಯಗಳನ್ನು ಆಯ್ಕೆ ಮಾಡಿಕೊಂಡಿದ್ದರ ಹಿಂದೆ ಒಂದು ಲೆಕ್ಕಾಚಾರವಿತ್ತು. ನನಗೆ ಮನಃಶಾಸ್ತ್ರವೆಂದರೆ ಇಷ್ಟ. ಅಲ್ಲದೆ ಸಾಹಿತ್ಯದ ಓದು, ಸೈಕಾಲಜಿಯ ಅಧ್ಯಯನಗಳಿಂದ ನಟನೆಗೆ ಸಹಾಯವಾಗುತ್ತದೆ. ಒಂದು ಸನ್ನಿವೇಶ, ಕಥೆಗಳನ್ನು ಅರ್ಥಮಾಡಿಕೊಳ್ಳಲು, ಒಂದು ಪಾತ್ರ ಅದಕ್ಕೆ ಹೇಗೆ ಸ್ಪಂದನ ನೀಡುತ್ತದೆ ಎಂದು ತಿಳಿದುಕೊಳ್ಳಲು ಸಾಹಿತ್ಯ ಮತ್ತು ಸೈಕಾಲಜಿಗಳ ಅಧ್ಯಯನ ತುಂಬ ಮುಖ್ಯ. ಹಾಗಾಗಿ ನಟನೆಗೆ ಪೂರಕ ಎಂಬ ಕಾರಣಗಳಿಗೇ ಆ ವಿಷಯಗಳನ್ನು ಆಯ್ದುಕೊಂಡೆ’ ಎಂದು ಸ್ಪಷ್ಟವಾಗಿಯೇ ಹೇಳುತ್ತಾರೆ ನಿಧಿ.

ಪದವಿ ಮುಗಿಯುತ್ತಿದ್ದ ಹಾಗೆಯೇ, ತಮ್ಮ ಕನಸಿಗೆ ದಾರಿಯನ್ನು ಸಾಫುಗೊಳಿಸಿಕೊಳ್ಳುವ ಕೆಲಸಕ್ಕೆ ಅಣಿಯಾದ ನಿಧಿ ಹೈದರಾಬಾದ್‌ನ, ‘ಅನ್ನಪೂರ್ಣ ಫಿಲಂ ಸ್ಕೂಲ್‘ನಲ್ಲಿ ಆರು ತಿಂಗಳ ನಟನಾತರಬೇತಿಗೆ ಸೇರಿಕೊಂಡರು. ಅಲ್ಲಿದ್ದಾಗಲೇ ಹಲವು ಕಿರುಚಿತ್ರಗಳಲ್ಲಿಯೂ ನಟಿಸಿದರು. ಅವರು ನಟಿಸಿದ ‘ನಾನ್ ದೇವ್ರು’ ಮತ್ತು ‘ಅಪ್ರಾಪ್ತ’ ಸಿನಿಮಾಗಳಿಗೆ ಪ್ರಶಸ್ತಿಗಳೂ ಬಂದವು. ಇವುಗಳಿಂದಲೇ ಅವರಿಗೆ

